ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

27th May 2017

# RVCE Startup with Jatayu Automatic Aeroplane

# ಹಳೆಯ ಸಮಸ್ಯೆಗಳಿಗೆ ವಿನೂತನ ತಾಂತ್ರಿಕ ಪರಿಹಾರ

ಬೆಂಗಳೂರು: ಸೈನಿಕರಿಗೊಂದು ಭದ್ರತೆಯ ವಸ್ತ್ರ, ರೈತರಿಗೆ ಉಪಯುಕ್ತವಾಗುವ ಯಂತ್ರ, ಟ್ರಾಫಿಕ್ ಸಮಸ್ಯೆಗೊಂದು ಪರಿಹಾರ... ಹೀಗೆ ಹಳೆಯ ಸಮಸ್ಯೆಗಳಿಗೆ ವಿನೂತನ ಆಲೋಚನೆಗಳು ಇಲ್ಲಿ ಪ್ರದರ್ಶನಗೊಂಡಿದ್ದವು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ನಗರದ ಆರ್.ವಿ. ತಾಂತ್ರಿಕ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ಸೃಷ್ಟಿ-2017' ಕಾರ್ಯಕ್ರಮದಲ್ಲಿ ರಾಜ್ಯದ ವಿವಿಧ ತಾಂತ್ರಿಕ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಯೋಜನೆಗಳನ್ನು ಪ್ರಸ್ತುತಪಡಿಸಿದ್ದರು.

ನಗರದ ಸಿಟಿ ತಾಂತ್ರಿಕ ಕಾಲೇಜಿನ ವಿದ್ಯಾರ್ಥಿಗಳು ಸಿದ್ಧಪಡಿಸಿದ್ದ ಸೈನಿಕರ ಜಾಡು ಹಿಡಿಯುವ ಮತ್ತು ಅವರ ಆರೋಗ್ಯ ಕಾಳಜಿ ವಹಿಸುವ ಸಮವಸ್ತ್ರ ಮೇಳದಲ್ಲಿ ಆಕರ್ಷಣೆಗೆ ಪಾತ್ರವಾಗಿತ್ತು.

'ಯುದ್ಧಭೂಮಿಯಲ್ಲಿ ಸೈನಿಕರಿಗೆ ನೆರವು ಸಿಗಬೇಕು ಎನ್ನುವ ದೃಷ್ಟಿಯಿಂದ ಈ ಸಮವಸ್ತ್ರ ರೂಪಿಸಿದ್ದೇವೆ. ಸೈನಿಕರ ಸ್ಥಳದ ಬಗ್ಗೆ ಸೇನಾನೆಲೆಗೆ ಮಾಹಿತಿ ಹೋಗುವ ವ್ಯವಸ್ಥೆಯನ್ನು ಅದರಲ್ಲಿ ಅಳವಡಿಸಲಾಗಿದೆ. ಅಲ್ಲದೆ ಹೃದಯ ಬಡಿತ ಹಾಗೂ ದೇಹದ ತಾಪಮಾನ ಪರೀಕ್ಷಿಸಿ ಅದರ ವಿವರವನ್ನು ಅದು ರವಾನಿಸುತ್ತದೆ. ಮೇಜರ್ ಹನುಮಂತಪ್ಪ ಅವರ ರೀತಿ ಹಿಮಪಾತದಲ್ಲಿ ಸಿಲುಕಿಕೊಂಡಾಗ ಅವರ ದೇಹದ ತಾಪಮಾನ ಕಡಿಮೆಯಾಗದಂತೆ ನೋಡಿಕೊಳ್ಳುವ ಸಾಧನವು ಇದರಲ್ಲಿ ಇದೆ' ಎಂದು ವಿದ್ಯಾರ್ಥಿನಿ ಶ್ರೀವಿದ್ಯಾ ವಿವರಿಸಿದರು.

**ಜಟಾಯು ಸ್ವಯಂ ಚಾಲಿತ ವಿಮಾನ:** ಪ್ರಕೃತಿ ವಿಕೋಪಗಳಲ್ಲಿ ಸಿಲುಕಿರುವರ ಶೋಧನೆಗಾಗಿ ಆರ್.ವಿ ಕಾಲೇಜಿನ ವಿದ್ಯಾರ್ಥಿಗಳ ತಂಡ 'ಜಟಾಯು' ಎಂಬ ಸ್ವಯಂಚಾಲಿತ ವಿಮಾನದ ಮಾದರಿಯೊಂದನ್ನು ರೂಪಿಸಿದೆ. 6.5 ಕೆ.ಜಿ. ತೂಕವಿರುವ ಈ ಜಟಾಯುಗೆ ಮೊದಲೇ ಮಾರ್ಗವನ್ನು ದಾಖಲಿಸಲಾಗುತ್ತದೆ. ಕ್ಯಾಮೆರಾ ಅಳವಡಿಸಲಾಗಿದ್ದು, ವಿಪತ್ತಿನಲ್ಲಿ ಸಿಲುಕಿದವರ ಚಿತ್ರ ಸೆರೆ ಹಿಡಿದು ರವಾನಿಸುತ್ತದೆ.




ವಿದ್ಯಾರ್ಥಿನಿ ಶ್ರೀವಿದ್ಯಾ ಮಾದರಿಯನ್ನು ವಿವರಿಸಿದರು –ಪ್ರಜಾವಾಣಿ ಚಿತ್ರ

> **ಉದ್ಯೋಗಕ್ಕಾಗಿ ಅರಸುವ ವಿದ್ಯಾರ್ಥಿಗಳನ್ನು ತಯಾರಿಸುವ ಬದಲು, ಉದ್ಯೋಗ ಸೃಷ್ಟಿಸುವ ವಿದ್ಯಾರ್ಥಿಗಳನ್ನು ಬೆಳೆಸುವ ಶಿಕ್ಷಣ ನಮ್ಮದಾಗಬೇಕು**
>
> **ಟೆಸ್ಸಾ ಥಾಮಸ್,** ಡಿಆರ್‌ಡಿಒ ಅಗ್ನಿ-ಮಿಸ್ಸೈಲ್ ವಿಭಾಗದ ಯೋಜನಾ ನಿರ್ದೇಶಕಿ

'₹1.5 ಲಕ್ಷ ವೆಚ್ಚದಲ್ಲಿ ಇದನ್ನು ತಯಾರಿಸಲಾಗಿದ್ದು, 500 ಗ್ರಾಂ ತೂಕದ ವಸ್ತುವನ್ನು ಕೊಂಡೊಯ್ಯುವ ಸಾಮರ್ಥ್ಯವನ್ನು ಇದು ಹೊಂದಿದೆ' ಎಂದು ತಂಡದಲ್ಲಿದ್ದ ಪವನ್ ವಿವರಿಸಿದರು.

ಒಣಗಿಸಿದ ಈರುಳ್ಳಿಯ ಚೊಟ್ಟು ಕತ್ತರಿಸುವುದು ಮತ್ತು ಗಾತ್ರದ ಮೇಲೆ ಈರುಳ್ಳಿ ವಿಂಗಡಿಸುವ ಯಂತ್ರವನ್ನು ಹುಬ್ಬಳಿಯ ಬಿ.ವಿ.ಬಿ. ತಾಂತ್ರಿಕ ಕಾಲೇಜಿನ ವಿದ್ಯಾರ್ಥಿಗಳು ಅವಿಷ್ಕರಿಸಿದ್ದಾರೆ. 10 ನಿಮಿಷದಲ್ಲಿ 60 ಕೆ.ಜಿ. ಈರುಳ್ಳಿಯನ್ನು ಇದರಲ್ಲಿ ಸ್ವಚ್ಛ ಮಾಡಬಹುದು.

ಅಡಿಕೆಗೆ ಔಷಧಿ ಸಿಂಪಡಿಸುವುದು, ಅಡಿಕೆ ಕೊಯ್ಯುವುದು, ಗುಂಡಿ ಕೊರೆಯುವುದು... ಹೀಗೆ ಅನೇಕ ಕೃಷಿಗೆ ಸಂಬಂಧಿಸಿದ ಯಂತ್ರಗಳನ್ನು ಇಲ್ಲಿ ಪ್ರದರ್ಶಿಸಲಾಗಿತ್ತು. ಈ ಮೇಳದಲ್ಲಿ 150 ಕಾಲೇಜುಗಳಿಂದ 1,800 ವಿದ್ಯಾರ್ಥಿಗಳು ಭಾಗವಹಿಸಿದ್ದು, 280 ಮಾದರಿಗಳ ಪ್ರದರ್ಶನಕ್ಕಿಟ್ಟಿದ್ದಾರೆ.

ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ರಾಜ್ಯಪಾಲ ವಜುಭಾಯ್ ವಾಲಾ, 'ಕೃಷಿಯಲ್ಲಿ ಇಸ್ರೇಲ್, ಆಟೊ ಮೊಬೈಲ್‌ನಲ್ಲಿ ಜರ್ಮನಿ, ಬಾಹ್ಯಾಕಾಶದಲ್ಲಿ ಅಮೆರಿಕ ಮುಂದಿದೆ. ನಮ್ಮ ವಿದ್ಯಾರ್ಥಿಗಳು ವ್ಯಸನಕ್ಕೆ ಮತ್ತು ಫ್ಯಾಷನ್ ಮಾಡುವುದಕ್ಕೆ ವಿದ್ಯಾರ್ಥಿಗಳು ಹೆಚ್ಚಿನ ಸಮಯ ವ್ಯಯ ಮಾಡುವುದನ್ನು ಬಿಟ್ಟು ಓದಿನ ಕಡೆ ಗಮನಹರಿಸಿದರೆ ನಮ್ಮ ದೇಶ ಪ್ರಗತಿ ಸಾಧಿಸುತ್ತದೆ' ಎಂದು ಹೇಳಿದರು.